ದಿನಾಂಕ:16.11.2013ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಅಪಂ.ರಾಜ್ ಇಲಾಖೆ ಹಾಗೂ ಅಧ್ಯಕ್ಷರು, ಟೆಂಡರ್ ಅಂಗೀಕರಿಸುವ ಪ್ರಾಧಿಕಾರ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು

ಹಾಜರಿದ್ದ ಅಧಿಕಾರಿಗಳು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಅಪಂ.ರಾಜ್ ಇಲಾಖೆ
2. ನಿರ್ದೇಶಕರು, SWSM, ಗ್ರಾಅಪಂ.ರಾಜ್ ಇಲಾಖೆ
3. ಮುಖ್ಯ ಇಂಜಿನಿಯರ್, PRED, ಬೆಂಗಳೂರು
4. ನಿರ್ದೇಶಕರು, ಕೇಂದ್ರ ಅಂತರ್ಜಲ ಮಂಡಳಿ, ಬೆಂಗಳೂರು.
5. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಅಪಂ.ರಾಜ್ ಇಲಾಖೆ
6. ಸರ್ಕಾರದ ಉಪ ಕಾರ್ಯದರ್ಶಿ (ಗ್ರಾನೀಸ), ಗ್ರಾಅಪಂ.ರಾಜ್ ಇಲಾಖೆ

ಮುಖ್ಯ ಇಂಜಿನಿಯರ್, PRED ರವರು ಸಮಿತಿಯ ಮುಂದೆ ಈ ಕೆಳಕಂಡ 2 ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳಿಗೆ ತಾಂತ್ರಿಕ ಸಮರ್ಥನೆಯನ್ನು ನೀಡಿ ಟೆಂಡರ್ ಪ್ರಸ್ತಾಪಗಳಿಗೆ ಸಂಬಂಧಿಸಿದಂತೆ ಅನುಮೋದನೆ ಕೋರಿದರು.

(ರೂ.ಲಕ್ಷಗಳಲ್ಲಿ)

| ಕ್ರ ಸಂ. | ಯೋಜನೆ | ಟೆಂಡರ್ ಗಿಟ್ಟ ಮೊತ್ತ | ಸಿಎಸ್‌ಆರ್ ದರಗಳನ್ವಯ ಟೆಂಡರ್‌ಗಿಟ್ಟ ಮೊತ್ತ | ಗುತ್ತಿಗೆದಾರರು ನಮೂದಿಸಿರುವ ಟೆಂಡರ್ ಮೊತ್ತ /ಶೇಕಡ ಹೆಚ್ಚುವರಿ | | | ಸಂದಾನದ ಟೆಂಡರ್ ಮೊತ್ತ/ ಶೇಕಡ ಹೆಚ್ಚುವರಿ | |
|---|---|---|---|---|---|---|---|---|
| | | | | ಟೆಂಡರ್ ಮೊತ್ತ | ಶೇಕಡ ಹೆಚ್ಚುವರಿ ಟೆಂಡರ್‌ಗಿಟ್ಟ ಮೊತ್ತದ ಮೇಲೆ | ಶೇಕಡ ಹೆಚ್ಚುವರಿ ಸಿಎಸ್‌ಆರ್ ದರಗಳ ಮೇಲೆ | ಗುತ್ತಿಗೆದಾರರು ಸಂದಾನದಲ್ಲಿ ಒಪ್ಪಿರುವ ಟೆಂಡರ್ ಮೊತ್ತ | ಶೇಕಡ ಹೆಚ್ಚು/ಕಡಿಮೆ (ಸಿಎಸ್‌ಆರ್ ದರದಂತೆ) |
| 1 | ಬಾಗಲಕೋಟೆ ಜಿಲ್ಲೆ ಬಾಗಲಕೋಟೆ ತಾಲ್ಲೂಕು ಕಲಾದಗಿ ಮತ್ತು ಇತರೆ 13 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ | 1963.27 | 2024.87 | 2315.56 | 17.94% ಹೆಚ್ಚು | 14.36% ಹೆಚ್ಚು | 2308.30 | 14.00% ಹೆಚ್ಚು |
| 2 | ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ ತಾಲ್ಲೂಕು, ಲವಳೇಶ್ವರ ಮತ್ತು ಇತರೆ 10 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ | 971.56 | 1017.10 | 1245.31 | 28.18% ಹೆಚ್ಚು | 22.44% ಹೆಚ್ಚು | 1168.64 | 14.90% ಹೆಚ್ಚು |

ಟೆಂಡರ್ ಪರಿಶೀಲನಾ ಸಮಿತಿಯು MVS ಯೋಜನೆಗಳಿಗೆ ಸಂಬಂಧಿಸಿದಂತೆ ಟೆಂಡರ್ ಪ್ರೀಮಿಯಂ ಒಪ್ಪಿಕೊಳ್ಳುವ ಸಂಬಂಧ ಶಿಫಾರಸ್ಸ್ ಮಾಡುವಾಗ ಪರಿಗಣಿಸಲಾಗಿದೆಯೆನ್ನಲಾದ ಐಟಂವಾರು ಸಮರ್ಥನೆ ಮತ್ತು ಹೆಚ್ಚಳದ ಕಾರಣಗಳನ್ನು ಕುರಿತು ಚರ್ಚಿಸುವಾಗ, CE/PREDರವರು ಆಡಳಿತಾತ್ಮಕ ಅನುಮೋದನೆಯನ್ನು ನೀಡುವಾಗ ಟೆಂಡರ್ ಪ್ರೀಮಿಯಂಗಳ ಹಿನ್ನೆಲೆಯಲ್ಲಿ ಮಂಜೂರಾತಿ ಪಡೆಯಲಾಗಿದ್ದು, CSR ದರಗಳನ್ನು ಗಣನೆಗೆ ತೆಗೆದುಕೊಂಡು ಟೆಂಡರ್ ಅನುಮೋದನೆಗೆ ಕ್ರಮವಹಿಸಲಾಗಿದೆಯೆಂದು ತಿಳಿಸಿದರು. ಈ ಎರಡೂ ಟೆಂಡರ್‌ಗಳು 2 ಮತ್ತು 3ನೇ ಕರೆ ಮೇರೆಗೆ ಸ್ವೀಕೃತಿಯಾಗಿರುವುದರಿಂದ, ವಿಳಂಬ ತಪ್ಪಿಸಲು ಹಾಗೂ ಪರಿಷ್ಕೃತ ಅಂದಾಜಿಗೆ ಅವಕಾಶ ನೀಡದೆ ಅನುದಾನ ಪ್ರಕ್ರಿಯೆ ಕೈಗೊಳ್ಳಲು ಅನುವಾಗುವಂತೆ CE,PRED ನೀಡಿದ ವರದಿ ಆಧರಿಸಿ ಸುಧೀರ್ಘ ಚರ್ಚೆ ನಂತರ ಮೇಲ್ಕಂಡ 2 ಬಹುಗ್ರಾಮ ಯೋಜನೆಗಳ ಟೆಂಡರ್ ಪ್ರಸ್ತಾವನೆಗಳನ್ನು ಅಂಗೀಕರಿಸಲು ಸಭೆ ನಿರ್ಣಯಿಸಿತು.

ಇನ್ನು ಮುಂದೆ, CE/PREDರವರು ಟೆಂಡರ್ ಪ್ರಸ್ತಾಪಗಳಿಗೆ ಸಂಬಂಧಿಸಿದಂತೆ, ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಎಷ್ಟನೇ ಕರೆಗೆ ಗುತ್ತಿಗೆದಾರರು ಭಾಗವಹಿಸಿರುತ್ತಾರೆನ್ನುವುದನ್ನು ನಮೂದಿಸ ತಕ್ಕದ್ದೆಂದು ಸೂಚಿಸಲಾಯಿತು.

ಸಹಿ/-
(ಟಿ.ಎಂ. ವಿಜಯ ಭಾಸ್ಕರ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ ಹಾಗೂ
ಅಧ್ಯಕ್ಷರು ಟೆಂಡರ್ ಅಂಗೀಕರಿಸುವ ಪ್ರಾಧಿಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಸಂ:ಗ್ರಾಅಪ 15 ಗ್ರಾನೀಸ (5) 13 ದಿನಾಂಕ:22.11.2013.

ಪ್ರತಿಯನ್ನು:

1. ಮುಖ್ಯ ಇಂಜಿನಿಯರ್, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆ, 2ನೇ ಮಹಡಿ, ಗ್ರಾಮೀಣಾಭಿವೃದ್ಧಿ ಭವನ, ಆನಂದರಾವ್ ವೃತ್ತ, ಬೆಂಗಳೂರು-09.
2. ಜಂಟಿ ನಿರ್ದೇಶಕರು, ಕೇಂದ್ರ ಅಂತರ್ಜಲ ಮಂಡಳಿ, ಸೌತ್ ವೆಸ್ಟ್ರನ್ ರೀಜನ್, 27ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆ, ಹೆಚ್.ಎಸ್.ಆರ್.ಲೇಔಟ್, ಸೆಕ್ಟರ್-1, ಬೆಂಗಳೂರು-560102.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
4. ನಿರ್ದೇಶಕರು SWSM, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
5. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು.

22.11.2013
(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ (ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.